## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

**ಓ.ಎಸ್. ಸಂಖ್ಯೆ.1365/2022** ಪಿ.ಡಬ್ಲೂ .1

ದಿನಾಂಕಃ 06-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

1. ನಾನು ಮೂಲತಃ ದೊಡ್ಡದುನ್ನಸಂದ್ರ ಗ್ರಾಮದವನು. ನನ್ನ ತಂದೆ, ತಾತ ಎಲ್ಲರೂ ಮೂಲತಃ ದೊಡ್ಡದುನ್ನಸಂದ್ರ ಗ್ರಾಮದವರೇ ಎಂದರೆ ಸರಿಯಲ್ಲ. ಅವರು ಆಂಧ್ರ ಪ್ರದೇಶ ವಿಜಯವಾಡ ದವರು. ನಾನು ದೊಡ್ಡದುನ್ನಸಂದ್ರ ಗ್ರಾಮಕ್ಕೆ ಬಂದು 40 ವರ್ಷ ಆಯಿತು. ನಾನು ಎಲೆಕ್ಟ್ರೀಕಲ್ ಕೆಲಸ ಮಾಡುತ್ತೇನೆ. ಸದರಿ ಕೆಲಸದ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ವಾದಿ ಮೂಲತಃ ಮುಳ್ಳೂರು ಗ್ರಾಮದಲ್ಲಿ ಜನಿಸಿರುತ್ತಾರೆ. ಅವರ ತಂದೆ ಹೆಸರು ಭದ್ರರೆಡ್ಡಿ ಅವರು ಮರಣ ಹೊಂದಿರುತ್ತಾರೆ. ವಾದಿ ದೊಡ್ಡದುನ್ನಸಂದ್ರ ಗ್ರಾಮಕ್ಕೆ ಬಂದು 50 ವರ್ಷ ಆಗಿರಬಹುದು.

2. ನಾನು ದೊಡ್ಡದುನ್ನಸಂದ್ರ ಗ್ರಾಮಕ್ಕೆ ಬಂದು 40 ವರ್ಷ ಆಗಿದೆ ಎಂದು ಹೇಳುತ್ತಿದ್ದು, ಅಂಕ್ಕೂ ಪೂರ್ವದಲ್ಲಿ ದಾವಾ ಆಸ್ತಿಯ ಬಗ್ಗೆ ಏನೆಲ್ಲಾ ವ್ಯವಹಾರಗಳು ಆಗಿರುತ್ತವೆ ಎಂದು ವಾದಿ ಹೇಳಿದ ಮೇರೆಗೆ ನನಗೆ ಗೊತ್ತು. ವಾದಿಗೆ 4 ಜನ ಮಕ್ಕಳು. ಅವರುಗಳಲ್ಲಿ 3 ಜನರು ಬೇರೆ ಇದ್ದು, ಅವರಲ್ಲಿ ಒಬ್ಬರಾದ ನನ್ನ ಹೆಂಡತಿ ಜೊತೆಯಲ್ಲಿದ್ದಾರೆ. ವಾದಿ ಮತ್ತು ನನ್ನ ಹೆಂಡತಿ ಜೊತೆಯಲ್ಲಿಯೆ ವಾಸವಿದ್ದಾರೆ ಎಂದು ತೋರಿಸಲು ದಾಖಲೆ ಹಾಜರು ಮಾಡಿದ್ದೇನೆ. ವಾದಿ ಗಂಡ ವ್ಯವಸಾಯ ಮಾಡುತ್ತಿದ್ದರು, ಈಗ ವಯಸ್ಸಾಗಿರುತ್ತದೆ. ವಾದಿ ಮತ್ತು ಆಕೆಯ ಗಂಡನ ಕುಟುಂಬಕ್ಕೆ 2 ಆಸ್ತಿಗಳು ಸೇರಿವೆ. ಅವುಗಳೆಂದರೆ ಸರ್ವೇ ನಂ.8/2 ರಲ್ಲಿ 3 ಎಕರೆ 13 ಗುಂಟೆ ಇದ್ದು ಅದರಲ್ಲಿ ಸ್ವಲ್ಪ ಮಾರಾಟ ಮಾಡಿದ್ದು ಉಳಿಕೆ ಆಸ್ತಿಯನ್ನು ಹೆಣ್ಣು ಮಕ್ಕಳಿಗೆ ನೀಡಿದ್ದಾರೆ. ಮತ್ತೊಂದು ಆಸ್ತಿಯ ಸರ್ವೇ ನಂ. 31/2.

3. ನಿಪಿ.2 ರ ಮೂಲಕ ಸರ್ವೇ ನಂ.31/2 ರ ಆಸ್ತಿ ಕ್ರಯ ಆಗಿರುತ್ತದೆ. ಸದರಿ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳ ಬಗ್ಗೆ ಗೊತ್ತಿರುತ್ತದೆಯೇ ಎಂದರೆ ಇಲ್ಲ. ನಾನು ಸದರಿ ದಾಖಲೆಯ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡು ಸಾಕ್ಷ್ಯ ನುಡಿಯುತ್ತಿದ್ದೇನೆ. ವಾದಿ ಭದ್ರರೆಡ್ಡಿ ರವರ ಮಗಳು ಎಂದು ತೋರಿಸಲು ದಾಖಲೆಗಳನ್ನು ಹಾಜರು ಮಾಡಿಲ್ಲ. ವಾದಿ ನ್ಯಾಯಾಲಯದಲ್ಲಿ ಸಾಕ್ಷ ನುಡಿಯಲು ತೊಂದರೆ ಇಲ್ಲ ಎಂದರೆ ಸರಿಯಲ್ಲ, ಅವರಿಗೆ ಆರೋಗ್ಯ ಸರಿಯಿರುವುದಿಲ್ಲ. ಆ ಬಗ್ಗೆ ದಾಖಲೆ ಹಾಜರು ಮಾಡಲು ಯಾವುದೇ ತೊಂದರೆ ಇಲ್ಲ.

4. ವಾದಿಯ ಕುಟುಂಬದ ಎಲ್ಲಾ ವ್ಯವಹಾರಗಳನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ. ದಾವಾ ಸರ್ವೇ ನಂ.31/2 ರ ಆಸ್ತಿಗೆ ಸಂಬಂಧಿಸಿದಂತೆ ಮತ್ತೊಂದು ದಾವೆ ನಡೆಯುತ್ತಿದೆ. ಸದರಿ ದಾವೆಯನ್ನು ವಾದಿಯ ಗಂಡ ವೆಂಕಟಸ್ವಾಮಿ ಸಲ್ಲಿಸಿದ್ದಾರೆ. ಸದರಿ ದಾವೆಯಲ್ಲಿ ಮಂಜುನಾಥ ಎಂಬುವವರು ವಿಚಾರಣೆ ನೀಡಿದ್ದಾರೆ. ಈ ಎರಡು ದಾವೆಗಳಲ್ಲಿ ನಾನು ಮತ್ತು ಮಂಜುನಾಥ ರವರು ಒಟ್ಟಾಗಿಯೇ ಬಂದು ಹೋಗುತ್ತಿದ್ದೇವೆ ಎಂದರೆ ಹೌದು. ಸದರಿ ದಾವೆಯಲ್ಲಿ ವಾದಿಯ ಎಲ್ಲಾ ವ್ಯವಹಾರಗಳನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ ಎಂದು ಸದರಿ ಮಂಜುನಾಥರವರು ವಿಚಾರಣೆ ನೀಡಿದ್ದಾರೆ ಎಂದರೆ ಗೊತ್ತಿಲ್ಲ.

5. ಪ್ರತಿವಾದಿಯ ತಾತ ನಂಜಾರೆಡ್ಡಿ ರವರ ಬಗ್ಗೆ ಗೊತ್ತಿಲ್ಲ. ನಂಜಾರೆಡ್ಡಿ ಮತ್ತು ಇತರರು ದಾವಾ ಆಸ್ತಿಗೆ ಸಂಬಂಧಿಸಿದಂತೆ ಅಸಲು ದಾವಾ ಸಂ.120/1970 ರಂತೆ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ಸಲ್ಲಿಸಿದ್ದ ವಿಚಾರ ಗೊತ್ತಿಲ್ಲ. ಸದರಿ ದಾವೆಯಲ್ಲಿ ವಾದಿಯ ತಂದೆ ಭದ್ರರೆಡ್ಡಿ ಯವರು 6 ನೇ ಪ್ರತಿವಾದಿಯಾಗಿದ್ದರು ಎಂದರೆ ಗೊತ್ತಿಲ್ಲ. ಸದರಿ ದಾವೆ ಡಿಕ್ರಿಯಾಗಿರುತ್ತದೆ ಎಂದರೆ ಗೊತ್ತಿಲ್ಲ. ಪ್ರತಿವಾದಿ ಲಿಖಿತ ಹೇಳಿಕೆ ಸಲ್ಲಿಸಿದ ನಂತರ ಮೇಲೆ ಹೇಳಿದ ದಾವೆಯ ಬಗ್ಗೆ ವಾದಿ ಮತ್ತು ಆಕೆಯ ಗಂಡನಿಂದ ತಿಳಿದುಕೊಳ್ಳಲು ಪ್ರಯತ್ನಿಸಿರುತ್ತೀರಾ ಎಂದರೆ ಇಲ್ಲ. ಸದರಿ ದಾವೆಯಲ್ಲಿ ವಾದಿಯ ಗಂಡನಾದ ವೆಂಕಟಸ್ವಾಮಿ ರವರು ಸಹ ಪ್ರತಿವಾದಿಯಾಗಿದ್ದರು ಎಂದರೆ ಗೊತ್ತಿಲ್ಲ.

6. ದಾವೆಯಲ್ಲಿ ಹೇಳಿರುವ ಅಸಲು ದಾವಾ ಸಂ.402/1982 ರ ದಾವೆ ಯಾರ ಯಾರ ನಡುವೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾವೆಯ ಬಗ್ಗೆ ನಾನು ವಾದಿಯಿಂದ ಮಾಹಿತಿ ತಿಳಿದುಕೊಂಡಿಲ್ಲ. ನಿಪಿ-5 ರ ಮರಣಶಾಸನ ಪತ್ರವನ್ನು ಭದ್ರರೆಡ್ಡಿ ರವರು ನನ್ನ ಮಗಳಾದ ವಾದಿಗೆ 1978 ರಲ್ಲಿ ಬರೆದುಕೊಟ್ಟಿರುತ್ತಾರೆ. ನಿಪಿ-5 ರ ಛಾಪಾ ಕಾಗದಗಳು ಜಿಲ್ಲಾ ಖಾಜನೆಯಿಂದ ಯಾವಾಗ ಬಿಡುಗಡೆಯಾಗಿರುತ್ತವೆ ಎಂದು ಗೊತ್ತಿಲ್ಲ. ಸದರಿ ಎರಡು ಛಾಪಾ ಕಾಗದಗಳ ಮೇಲೆ ದಿ.08-06-1978 ರ ಮೊಹರು ಇದೆ ಎಂದರೆ ಹೌದು. ದಿ.08-06-1978 ರಂದು ಜಿಲ್ಲಾ ಖಜಾನೆಯಿಂದ ಛಾಪಾ ಕಾಗದ ಬಂದ ಕಾರಣ ದಿ.15-02-1978 ರಂದು ವಿಲ್ ಅಸ್ತಿತ್ವಕ್ಕೆ ಬರಲು ಸಾಧ್ಯವಿರುವುದಿಲ್ಲ, ಅದನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

7 ದಾವಾ ಆಸ್ತಿ ಭಧ್ರಾರೆಡ್ಡಿ ರವರಿಗೆ ದೊಡ್ಡಬ್ಬಯ್ಯ ರವರಿಂದ ಕ್ರಯದ ಮೂಲಕ 1958 ರಂದು ಬಂದಿರುತ್ತದೆ ಅದರ ವಿಸ್ತೀರ್ಣ ಗೊತ್ತಿಲ್ಲ, ಚಕ್ಕುಬಂದಿ ಗೊತ್ತು, ಪೂರ್ವಕ್ಕೆ: ವೆಂಕಟಸ್ವಾಮಿ ರವರ ಜಮೀನು, ಪಶ್ಚಿಮಕ್ಕೆ: ಗ್ರಾಮಠಾಣಾ, ಉತ್ತರಕ್ಕೆ: ಕರಗದ ಪಿಳ್ಳಪ್ಪ ಮತ್ತು ದಕ್ಷಿಣಕ್ಕೆ: ರಸ್ತೆ ಇದೆ. ಮೇಲೆ ಹೇಳಿದ ಚಕ್ಕುಬಂದಿ ಭಧ್ರಾರೆಡ್ಡಿ ರವರು ದೊಡ್ಡಬ್ಬಯ್ಯ ರವರಿಂದ ಖರೀದಿಸಿದ 1958 ರ ಕ್ರಯ ಪತ್ರದ ಚಕ್ಕುಬಂದಿಯಾಗಿರುತ್ತದೆ. ಸದರಿ 1958 ರ ಕ್ರಯ ಪತ್ರವನ್ನು ಹಾಜರು ಮಾಡಿದ್ದೇನೆ. ನಾನು ಆ ರೀತಿ 1958 ರ ಕ್ರಯ ಪತ್ರವನ್ನು ಹಾಜರು ಮಾಡದೇ ಇದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ನಿಪಿ.5 ರ ವಿಲ್ ನಲ್ಲಿ 12 ಗುಂಟೆಗೆ ಚಕ್ಕುಬಂದಿಯನ್ನು ಬರೆದಿದ್ದಾರೆ. ಪೂರ್ವಕ್ಕೆ: ವೆಂಕಟಸ್ವಾಮಿ ರವರ ಜಮೀನು, ಪಶ್ಚಿಮಕ್ಕೆ: ಗ್ರಾಮಠಾಣಾ, ಉತ್ತರಕ್ಕೆ: ಕರಗದ ಪಿಳ್ಳಪ್ಪ ಮತ್ತು ದಕ್ಷಿಣಕ್ಕೆ: ರಸ್ತೆ ಇದೆ. ಸದರಿ ಚಕ್ಕುಬಂದಿ ನಿಪಿ-5 ರಲ್ಲಿ ನಮೂದಾಗಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.